ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

(ಸ್ವಾಯತ್ತ)

ಬಿ.ಎನ್. ರಸ್ತೆ, ಮೈಸೂರು – 570 025

ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

Ph: 0821-2548236 & 2548380. FAX: 0821-2548238 E-mail: jssautonomous@gmail.com Website: JSSCACS.edu.in

ದಿನಾಂಕ: 01.03.2017

## ಪ್ರಕಟಣೆ ಕೃಪೆಗಾಗಿ

## ನಗದುರಹಿತ ಆರ್ಥಿಕವ್ಯವಹಾರಕ್ಕೆ ಕರೆ

ಮೈಸೂರು ನಗರದ ಬಿ ಎನ್ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ವತಿಯಿಂದ ದಿನಾಂಕ:27.02.2017 ರಂದು " ನಗದುರಹಿತ ಆರ್ಥಿಕ ವ್ಯವಹಾರ"ಗಳ ಬಗ್ಗೆ ವಿಶೇಷ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಉಪನ್ಯಾಸಕರಾಗಿ ಆಗಮಿಸಿದ್ದ ಮೈಸೂರಿನ ಬ್ಯಾಂಕಾಧಿಕಾರಿಗಳು ವ್ಯಕ್ತಿತ್ವ ವಿಕಸನ ತರಬೇತುದಾರರಾದ ಶ್ರೀ ಪ್ರಧ್ಯುಮ್ನ ಅವರು 2016 ರ ನವೆಂಬರ್ 8 ರಂದು ಪ್ರಧಾನ ಮಂತ್ರಿಗಳು ದೇಶದಲ್ಲಿ ಜಾರಿಗೊಳಿಸಿದ ನೋಟುಗಳ ಅಮಾನ್ಯೀಕರಣ ಕ್ರಮವನ್ನು ಪ್ರಸ್ತಾಪಿಸಿ, ದೇಶದಲ್ಲಿನ ಕಪ್ಪುಹಣ, ಖೋಟಾನೋಟು, ತೆರಿಗೆ ವಂಚನೆ, ಹವಾಲಾದಂಥೆ, ಲಂಚ, ಭ್ರಷ್ಟಾಚಾರ ಮೊದಲಾದ ಅಕ್ರಮ ವ್ಯವಹಾರಗಳನ್ನು ತಡೆಗಟ್ಟುವ ಉದ್ದೇಶದಿಂದ ಸದರಿ ಕ್ರಮವನ್ನು ಜಾರಿಗೊಳಿಸಲಾಗಿದೆ. ಈ ಕ್ರಮದಿಂದ ಉಗ್ರರ ಚಟುವಟಿಕೆ, ನಕ್ಸಲ್ ಚಟುವಟಿಕೆಗಳು ಕಡಿಮೆಯಾಗಿರುವುದು, ಖೋಟಾನೋಟುಗಳು ನಿಷ್ಕ್ರಿಯಗೊಂಡಿರುವುದು, ಜನ್‌ಧನ್ ಖಾತೆಗಳ ಹೆಚ್ಚಳ, ಠೇವಣಿಗಳ ಹೆಚ್ಚಳ, ಸಾಲದ ಮೇಲಿನ ಬಡ್ಡಿದರಗಳು ಕಡಿಮೆಯಾಗುತ್ತಿರುವುದರ ಅಂಶಗಳ ಬಗ್ಗೆ ಮಾಹಿತಿ ನೀಡಿದರು.

ಮುಂದುವರೆದು ಮಾತಾಡಿದ ಅವರು ನಗದು ಹಣವನ್ನು ಬಳಸದೆ ಎಲೆಕ್ಟ್ರಾನಿಕ್ಸ್ ಉಪಕರಣಗಳ ಮೂಲಕ ವ್ಯವಹಾರ ನಡೆಸುವ ಕ್ರಮವೇ "ನಗದು ರಹಿತ ಆರ್ಥಿಕ ವ್ಯವಹಾರವಾಗಿದೆ ಎಂದು ತಿಳಿಸುತ್ತಾ, ಮೊಬೈಲ್ ಮೂಲಕ ಸುಮಾರು 20 ಆ್ಯಪ್‌ಗಳನ್ನು ಬಳಸಿ ನಗದುರಹಿತ ಆರ್ಥಿಕವ್ಯವಹಾರ ಮಾಡುವ ಬಗ್ಗೆ ತಿಳಿಸಿದರು. ಇವರ ಜೊತೆ ಬಂದಿದ್ದ ಶ್ರೀರಂಗನಾಥ್ ತಂಡದವರು ಮೊಬೈಲ್‌ಗಳಲ್ಲಿ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ಹಣವನ್ನು ವರ್ಗಾಯಿಸುವ ಬಗೆಯನ್ನು ಪ್ರಾಯೋಗಿಕವಾಗಿ ತಿಳಿಸಿಕೊಟ್ಟರು. ಇದರಿಂದ ಸಾಕಷ್ಟು ಶ್ರಮ ಮತ್ತು ಸಮಯ ಉಳಿತಾಯವಾಗುತ್ತದೆ. ಆದುದರಿಂದ ಎಲ್ಲರೂ ನಗದು ರಹಿತ ಆರ್ಥಿಕ ವ್ಯವಹಾರಗಳನ್ನು ಕೈಗೊಳ್ಳಬೇಕೆಂದು ಕರೆ ನೀಡಿದರು.

ಕಾಲೇಜಿನ ಪ್ರಾಂಶುಪಾಲರಾದ ಪ್ರೊ ಎಂ ಮಹದೇವಪ್ಪ ಮತ್ತು ವಿಭಾಗದ ಮುಖ್ಯಸ್ಥರಾದ ಪ್ರೊ ಡಿ ಎಸ್ ಸದಾಶಿವಮೂರ್ತಿರವರು ಉಪಸ್ಥಿತರಿದ್ದರು. ಪ್ರೊ. ಸಿ ರಮೇಶ್ ಸ್ವಾಗತಿಸಿದರು. ಕು. ಎನ್ ದೀಪಾ ಕಾರ್ಯಕ್ರಮ ನಿರೂಪಿಸಿ ವಂದಿಸಿದರು. ಕಾರ್ಯಕ್ರಮದಲ್ಲಿ ನೂರಾರು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಪಾಲ್ಗೊಂಡಿದ್ದರು.

ಪ್ರಾಂಶುಪಾಲರು

(ಪ್ರೊ ಎಂ ಮಹದೇವಪ್ಪ)

ಪ್ರಾಂಶುಪಾಲರು
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
ಬಿ.ಎನ್. ರಸ್ತೆ, ಮೈಸೂರು-25

ಗೆ

ಸಂಪಾದಕರು

--------------

--------------

ಮೈಸೂರು